# ಶಿಕ್ಷಕರ ಶಿಕ್ಷಣದಲ್ಲಿ ಜಡತ್ವ ಹಾಗು ನ್ಯಾಯಾಂಗ ಹಸ್ತಕ್ಷೇಪದ ಅಗತ್ಯತೆ

ಪೂನಂ ಬಾತ್ರ

ಗ್ರಾಮೀಣ ಮಧ್ಯಪ್ರದೇಶದ ಇಬ್ಬರು ಮಕ್ಕಳ ತಾಯಿಯಾದ 20 ವರ್ಷದ ಸರಸ್ವತಿಯು, ತನ್ನ ಮಕ್ಕಳು ತನ್ನಂತಲ್ಲದೆ ಎಂಟು ವರ್ಷಗಳ ಶಾಲಾ ಶಿಕ್ಷಣವನ್ನು ಮುಗಿಸಬಹುದೆಂದು ಆಶಿಸುತ್ತಾಳೆ. ಹನ್ನೆರಡು ವರ್ಷದ ಕಿಶನ್ ಜಾತವ್, ಅಬ್ದುಲ್ ಕಲಾಂ ಅವರಂತೆ 'ಬಾಹ್ಯಾಕಾಶ ವಿಜ್ಞಾನಿ' ಆಗಲು ಬಯಸಿದ್ದನು. ಆದರೆ ಬೈಸಿಕಲ್ ರಿಪೇರಿ ಅಂಗಡಿಯೊಂದನ್ನು ನಡೆಸಲು ತನ್ನ ಸಹೋದರನಿಗೆ ಸಹಾಯ ಮಾಡಲು ಆರನೇ ತರಗತಿಯಲ್ಲೆ ಶಾಲೆಯಿಂದ ಹೊರಗುಳಿಯಬೇಕಾಯಿತು.

ಇಂತಹ ಲಕ್ಷಾಂತರ ಭಾರತೀಯ ಮಕ್ಕಳ ಜೀವನವನ್ನು ಒಟ್ಟಿಗೆ ಜೋಡಿಸುವ ಸಾಮಾನ್ಯ ಎಳೆ ಯಾವುದು? ಪ್ರಾಥಮಿಕ ಶಿಕ್ಷಣಕ್ಕೆ ಸಾಂವಿಧಾನಿಕವಾಗಿ ಖಾತರಿಪಡಿಸಿದ ಅರ್ಹತೆಯನ್ನು ನೀಡಲು ಭಾರತದ ವೈಫಲ್ಯ - ಶಿಕ್ಷಣವು, ಈ ಮಕ್ಕಳು, ಅವರ ಪೋಷಕರು ಮತ್ತು ಸಮುದಾಯಗಳು ತಮ್ಮ ಜೀವನವನ್ನು ಅರ್ಥಪೂರ್ಣವಾದ ರೀತಿಯಲ್ಲಿ ಬದಲಾಯಿಸಲು ಮತ್ತು ಬದುಕಿಗೆ ವೇಗವನ್ನು ದಕ್ಕಿಸಿಕೊಳ್ಳಲು ಶಕ್ತರನ್ನಾಗಿಸುತ್ತದೆ. ಲಾಭಕ್ಕಾಗಿ ಖಾಸಗಿ ಶಾಲೆಗಳನ್ನು ಪ್ರತಿಪಾದಿಸುವ ದೂರದ ಅಧಿಕಾರಶಾಹಿ ಸಮಿತಿಗಳು ಅಥವಾ ಜಾಗತಿಕ ಜಾಲಗಳು ದೇಶದ ಮಾನವ ಬಂಡವಾಳ ಮತ್ತು ಜಾಗತೀಕರಣದ ಪ್ರಪಂಚದಲ್ಲಿ ಸ್ಪರ್ಧಿಸುವ ಅದರ ಸಾಮರ್ಥ್ಯ ನಿರ್ಮಾಣವನ್ನು ನಿರ್ದೇಶಿಸತಕ್ಕದ್ದಲ್ಲ.

ಸಂಕೀರ್ಣ ರಚನಾತ್ಮಕ ಸವಾಲುಗಳಿಗೆ ಉತ್ತರವು ತುಂಬಾ ಸರಳ ಆದರೆ ಅಗಮ್ಯ- ಅದು ಶಾಲಾ ಕೊಠಡಿ. ಪ್ರತಿದಿನ ಭಾರತದಲ್ಲಿನ ಮಕ್ಕಳ ಹೃದಯ, ಮನಸ್ಸು ಮತ್ತು ಭವಿಷ್ಯಕ್ಕಾಗಿ ಇರುವ ಹೋರಾಟವು ಲಕ್ಷಾಂತರ ಶಾಲೆಗಳ ತರಗತಿ ಕೋಣೆಗಳಲ್ಲಿ ಕಳೆದುಹೋಗುತ್ತಿದೆ. ಬೋಧನಾ-ಕಲಿಕೆ ಪ್ರಕ್ರಿಯೆಯ ವಾಸ್ತವವನ್ನು ಶೀಘ್ರದಲ್ಲಿಯೇ ಬದಲಾಯಿಸಲು ನಮಗೆ ಸಾಧ್ಯವಾಗದಿದ್ದರೆ - ಶಿಕ್ಷಣಕ್ಕೆ ಜಿಡಿಪಿಯ 3 ಅಥವಾ 6 ಪ್ರತಿಶತದಷ್ಟು ಮುಡಿಪಿದ್ದರೂ, ಇನ್ನೊಂದು ಪೀಳಿಗೆಗೆ ಈ ಹೋರಾಟದ ಉದ್ದೇಶವು ಕಳೆದುಹೋಗಬಹುದು.

ಇದನ್ನು ಹೇಳಿದ ನಂತರ, ನಮ್ಮ ಯಶಸ್ಸಿನ ಪಾಲನ್ನು ಪಡೆದುಕೊಳ್ಳುವುದಕ್ಕೆ ಹಾಗು ಸಾಮಾನ್ಯ ವ್ಯಕ್ತಿಯ ನಿರೀಕ್ಷೆಗಳನ್ನು ಮುಟ್ಟುವುದಕ್ಕೆ ನಾವು ಏಕೆ ವಿಫಲರಾಗಿದ್ದೇವೆ ಎಂದು ಅರಿಯುವುದು ಬಹಳ ಮುಖ್ಯ.

ಅರ್ಧ ಶತಮಾನದ ಸುದೀರ್ಘ ಚರ್ಚೆಯ ನಂತರ ಶಿಕ್ಷಣದ ಹಕ್ಕನ್ನು (ಆರ್‌ಟಿಇ) ಭಾರತೀಯ ಸಂವಿಧಾನದಲ್ಲಿ ಮೂಲಭೂತ ಹಕ್ಕು ಎಂದು 2009 ರಲ್ಲಿ ಪ್ರತಿಪಾದಿಸಲಾಯಿತು. ಸಾರ್ವತ್ರಿಕ ಗುಣಮಟ್ಟದ ಶಿಕ್ಷಣದ 'ತಲುಪುವಿಕೆ' ಯನ್ನು ಖಚಿತಪಡಿಸಿಕೊಳ್ಳಲು ಮತ್ತು ನಿಯಂತ್ರಿಸಲು ಭಾರತೀಯ ಸರ್ಕಾರದ ಮೇಲೆ ಇದು ಕಾನೂನುಬದ್ಧ ಜವಾಬ್ದಾರಿಗಳನ್ನು ಸ್ಥಾಪಿಸಿತು;. ಈ ಸಾಂವಿಧಾನಿಕ ಅರ್ಹತೆಯನ್ನು ಪೂರೈಸುವಲ್ಲಿನ ಅದಕ್ಷತೆಯನ್ನು ಪರಿಹರಿಸುವ ಕಾರ್ಯ ಮಾತ್ರ ನಂತರದಲ್ಲಿ ಸಂಸತ್ತು ಮತ್ತು ಕೇಂದ್ರ ಹಾಗು ರಾಜ್ಯ ಸರ್ಕಾರಗಳಿಂದ ಉಚ್ಚ ನ್ಯಾಯಾಲಯಗಳು ಮತ್ತು ಸರ್ವೋಚ್ಚ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿತು.

ಶಾಲಾ ವ್ಯವಸ್ಥೆಯಲ್ಲಿನ ಆರ್‌ಟಿಇ ಗೆ ಸಂಬಂಧಿಸಿದಂತೆ ನ್ಯಾಯಾಲಯ ಮಾಡುವ ವ್ಯಾಖ್ಯಾನದಲ್ಲಿ ಬಿಕ್ಕಟ್ಟು ತಲೆದೋರಿದರೆ ಅಂತಹ ನೀತಿ ಕ್ರಮಗಳು, ಮಧ್ಯಸ್ಥಿಕೆಗಳು, ಲೋಪ ಮತ್ತು ಕೆಲಸಗಳನ್ನು ರದ್ದುಮಾಡಲಾಗುತ್ತದೆ. ಮತ್ತು ನ್ಯಾಯಾಲಯದ ಮೇಲ್ವಿಚಾರಣೆಯ ನಿಯಂತ್ರಣ ಮತ್ತು ಹಸ್ತಕ್ಷೇಪದಿಂದ ಇದನ್ನು ಬದಲಾಯಿಸಲಾಗುತ್ತದೆ.[1]

2011 ರ ಜೂನ್‌ನಲ್ಲಿ, ಶಿಕ್ಷಕರ ಶಿಕ್ಷಣದಲ್ಲಿ ವ್ಯಾಪಕವಾದ ದುಷ್ಕೃತ್ಯ[2], ನೀತಿ ವಿರೂಪಗಳು ಮತ್ತು ನಿಯಂತ್ರಕ ಸಂಘರ್ಷಗಳ ದೂರುಗಳನ್ನು

---

1

2 ರಾಷ್ಟ್ರಸಂತ ಟಿ.ಎಂ.ಎಸ್. ಮತ್ತು ಎಸ್.ಬಿ.ವಿ.ಎಂ.ಸಿ.ಎ. ವಿದ್ ಮತ್ತು ಇತರರು *v* ಗಂಗಾಧರ್ ನೀಲಕಂಠ ಶಿಂಧೆ ಮತ್ತು ಇತರರು ಎಸ್‌ಎಲ್‌ಪಿ

ಪರಿಹರಿಸಲು ಸುಪ್ರೀಂ ಕೋರ್ಟ್ ಬಹುದೊಡ್ಡ ಹಸ್ತಕ್ಷೇಪವನ್ನು ಮಾಡಿತು. ಇಲ್ಲಿ ಮಂಡಲದ ಹಾವಿನ ಗೂಡುಗಳಂತೆ ವ್ಯಾಪಕವಾದ ಭ್ರಷ್ಟಾಚಾರ, ನಕಲಿ ಕಾಲೇಜುಗಳು, ದುಷ್ಕೃತ್ಯ ಮತ್ತು ನಿಷ್ಕ್ರಿಯ ಶಿಕ್ಷಕ ಶಿಕ್ಷಣ ಸಮುದಾಯದಿಂದ ಶುರುವಾಗಿ ಅಕ್ರಮ ಮತ್ತು ವ್ಯಾಪಕವಾದ ರಾಜಕೀಯ ಪ್ರೋತ್ಸಾಹದ ವರೆಗಿನ ಪಟ್ಟಭದ್ರ ಹಿತಾಸಕ್ತಿಗಳನ್ನು ಬಹಿರಂಗಪಡಿಸಿದ ನಂತರ - ಇದು ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಜೆ.ಎಸ್. ವರ್ಮಾ ಆಯೋಗವನ್ನು (ಜೆವಿಸಿ) ಸ್ಥಾಪಿಸಿತು.

ವರ್ಷಪೂರ್ತಿ ರಾಷ್ಟ್ರವ್ಯಾಪಿ ಸಮಾಲೋಚನೆಗಳ ನಂತರ ಜೆವಿಸಿ 2012 ರ ಆಗಸ್ಟ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಈ ಕ್ಷೇತ್ರವನ್ನು ಸುಧಾರಿಸಲು ಸಮಗ್ರ ವರದಿ[3] ಮತ್ತು ಕ್ರಿಯಾ ಯೋಜನೆಯನ್ನು ಮಂಡಿಸಿತು. ಜೆವಿಸಿ ಗಮನಿಸಿದಂತೆ "... 90 ಪ್ರತಿಶತದಷ್ಟು ಸೇವಾಪೂರ್ವ ಶಿಕ್ಷಕರ ತರಬೇತಿ ಸಂಸ್ಥೆಗಳು ಖಾಸಗಿ ವಲಯದಲ್ಲಿವೆ. ಮತ್ತೊಂದೆಡೆ, ಆರ್‌ಟಿಇ ಕಾಯ್ದೆಯ ಪ್ರಕಾರ ಸುಮಾರು 80 ಪ್ರತಿಶತ ಮಕ್ಕಳು ರಾಜ್ಯಗಳ ಶಾಲೆಗಳಲ್ಲಿ ದಾಖಲಾಗಿದ್ದು ಇದು ರಾಜ್ಯಗಳ ನೇರ ಜವಾಬ್ದಾರಿಯಾಗಿದೆ." ಮತ್ತು ಎನ್‌ಸಿಟಿಇ (ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ) ಕಳಪೆ-ಗುಣಮಟ್ಟದ ಅಧ್ಯಾಪಕ ಶಿಕ್ಷಕರ ಸಂಸ್ಥೆಗಳು (ಅಶಿಸಂ) ಟಿಇಐಗಳ ಪ್ರಸರಣವನ್ನು ನಿಯಂತ್ರಿಸಲು ಅಸಮರ್ಥತೆಯನ್ನು ತೋರಿದೆ. ಇದು ವಾಣಿಜ್ಯೀಕರಣಕ್ಕೆ ಕಾರಣವಾಗಿದೆ ... ಆ ಮೂಲಕ ಶಿಕ್ಷಕರ ಶಿಕ್ಷಣದ ಗುಣಮಟ್ಟದ ಮೇಲೆ ಪ್ರತಿಕೂಲವಾಗಿ ಪರಿಣಾಮ ಬೀರುತ್ತದೆ '(ಪು. 21).

ಜೆವಿಸಿ ಕಂಡುಕೊಂಡಂತೆ ಶಿಕ್ಷಣವನ್ನು ಹಾಳುಗೆಡವಿರುವ ಪ್ರಮುಖ ಸಮಸ್ಯೆಗಳೆಂದರೆ: ಶಿಕ್ಷಕರ ಶಿಕ್ಷಣ ಸಂಸ್ಥೆಗಳ ಅಶಿಸಂ (ಟಿಇಐ) ಏಕಾಂಗಿ ಸ್ವರೂಪ; ಕಳಪೆ-ಗುಣಮಟ್ಟದ ವಾಣಿಜ್ಯ ಖಾಸಗಿ ಸಂಸ್ಥೆಗಳ ಪ್ರಸರಣ; ಬದಲಾಗದ (65 ವರ್ಷಗಳಿಗೂ ಹೆಚ್ಚು) ಅವಧಿಯ ಚೌಕಟ್ಟು, ಪಠ್ಯಕ್ರಮ ಮತ್ತು ಶಿಕ್ಷಣಶಾಸ್ತ್ರದ ಚೌಕಟ್ಟು, ಇದರೊಳಗೆ ಶಿಕ್ಷಕರನ್ನು ರೂಪಿಸಲಾಗುತ್ತದೆ; ವೃತ್ತಿಪರ ಶಿಕ್ಷಕರು ಮತ್ತು ಶಿಕ್ಷಕ ಶಿಕ್ಷಕರನ್ನು ತಯಾರಿಸಲು ಶಿಕ್ಷಕರು ಮತ್ತು ಶಿಕ್ಷಕ ಶಿಕ್ಷಣತಜ್ಞರನ್ನು ಮತ್ತು ಅಸ್ತಿತ್ವದಲ್ಲಿರುವ ಸ್ನಾತಕೋತ್ತರ (ಸ್ನಾತಕೋತ್ತರ ಶಿಕ್ಷಣ - ಎಂಇಡಿ) ಕಾರ್ಯಕ್ರಮಗಳ ಸಾಮಾನ್ಯ ಮತ್ತು ಸೀಮಿತಗೊಳಿಸುವ ಸ್ವರೂಪವನ್ನು ಸಿದ್ಧಪಡಿಸುವ ಸಾಂಸ್ಥಿಕ ಸಾಮರ್ಥ್ಯದ ತೀವ್ರ ಕೊರತೆ.

ಮಹಾರಾಷ್ಟ್ರದ 291 ಸಂಸ್ಥೆಗಳನ್ನು ಪರಿಶೀಲಿಸಿದ ನ್ಯಾಯಮೂರ್ತಿ ವರ್ಮಾ ಆಯೋಗವು ನಂತರ 85% ಕ್ಕಿಂತ ಹೆಚ್ಚು ಸಂಸ್ಥೆಗಳನ್ನು ಮುಚ್ಚಲು ಶಿಫಾರಸು ಮಾಡಿದೆ. ಈ ಅನುಭವದ ಆಧಾರದ ಮೇಲೆ ಆಯೋಗ ಕೆಲವು ಶಿಫಾರಸುಗಳನ್ನು ಮಾಡಿತು: ಸಂಸ್ಥೆಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಎನ್‌ಸಿಟಿಇ 'ಮಾನ್ಯತೆ ಪಡೆದ ಸಂಸ್ಥೆಗಳ ಪರಿಶೀಲನೆ ನಡೆಸಲು ಹೊಸ ಪ್ರಕ್ರಿಯೆಯ ಚೌಕಟ್ಟನ್ನು ಅಭಿವೃದ್ಧಿಪಡಿಸಬೇಕು, ಪ್ರಕ್ರಿಯೆಯ ಮಾನದಂಡಗಳ ಮೇಲೆ ಹೆಚ್ಚಿನ ಗಮನವನ್ನು ನೀಡಬೇಕು' ಎಂದು ಶಿಫಾರಸು ಮಾಡಿದೆ ... ಅಶಿಸಂ(ಟಿಇಐ)ಗಳನ್ನು ಸ್ಥಾಪಿಸಲು ಸರ್ಕಾರ ತನ್ನ ಹೂಡಿಕೆಯನ್ನು ಹೆಚ್ಚಿಸಬೇಕು.

ಕ್ಷೇತ್ರವನ್ನು ಪುನರುಜ್ಜೀವನಗೊಳಿಸಲು, ಶಿಕ್ಷಕರ ಸೇವಾಪೂರ್ವ ಮತ್ತು ಸೇವೆಯ ಅವಧಿಯ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸುಧಾರಿಸಲು, ಎನ್‌ಸಿಟಿಇಯ ಶಾಸನಬದ್ಧ ನಿಯಂತ್ರಕ ಕಾರ್ಯಗಳನ್ನು ಮಾರ್ಪಡಿಸಲು ಮತ್ತು ಎನ್‌ಸಿಟಿಇ ಕಾಯ್ದೆಯಲ್ಲಿ ಪರಿಷ್ಕರಣೆ ಮಾಡಲು ವರದಿಯು 30 ನಿರ್ದಿಷ್ಟ ಶಿಫಾರಸುಗಳನ್ನು ಮಾಡಿದೆ.

ಇವುಗಳನ್ನು ಸುಪ್ರೀಂ ಕೋರ್ಟ್ ಅನುಮೋದಿಸಿತು, ನಂತರ ಚಾಲ್ತಿಯ ಅಭ್ಯಾಸಕ್ಕಿಂತ ಭಿನ್ನವಾಗಿ ನ್ಯಾಯಮೂರ್ತಿ ವರ್ಮಾ ಆಯೋಗವು (ಜೆವಿಸಿ)

(ಸಿವಿಲ್) ನಂ. 4247-4248/2009

[3] ಜಿಓಐ (2012). ವಿಷನ್ ಆಫ್ ಟೀಚರ್ ಎಜುಕೇಷನ್ ಇನ್ ಇಂಡಿಯಾ. ಕ್ವಾಲಿಟಿ ಅಂಡ್ ರೆಗ್ಯುಲೇಟರಿ ಪರ್‌ಸ್ಪೆಕ್ಟಿವ್, ಸುಪ್ರೀಂ ಕೋರ್ಟ್ ನೇಮಕ ಮಾಡಿದ ಶಿಕ್ಷಕ ಶಿಕ್ಷಣದ ಕುರಿತ ಉನ್ನತ ಮಟ್ಟದ ಆಯೋಗದ ವರದಿ; ಎಂಎಚ್‌ಆರ್‌ಡಿ.

ಶಿಫಾರಸುಗಳನ್ನು ನಿಷ್ಠೆಯಿಂದ ಅನುಷ್ಠಾನಗೊಳಿಸುವ ಬಗ್ಗೆ ಸ್ವತಂತ್ರ ಮೇಲ್ವಿಚಾರಣೆಯನ್ನು ಒದಗಿಸಲು ಭಾರತ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಶಿಕ್ಷಕ ಶಿಕ್ಷಣ ಕ್ಷೇತ್ರದ ಸಂಸ್ಥೆಗಳ ನೀತಿ ರಚನೆ, ನಿಯಂತ್ರಣ, ಸಲಹೆ ಮತ್ತು ಅನುಷ್ಠಾನ ಸಂಸ್ಥೆಗಳಿಂದ ಮೂವರು ವ್ಯಕ್ತಿಗಳ ಅನುಷ್ಠಾನ ಸಮಿತಿ (ಐಸಿ)[4] ಯನ್ನು ಸ್ಥಾಪಿಸಿತು.

ಅನುಷ್ಠಾನ ಸಮಿತಿ (ಐಸಿ)ಯ ಆಜ್ಞೆಯ ಮೇರೆಗೆ ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ (ಎನ್‌ಸಿಟಿಇ) ಮತ್ತು ಭಾರತ ಸರ್ಕಾರ ಸ್ಥಾಪಿಸಿದ ಸಮಿತಿಗಳು ನಂತರ ಮಾರ್ಗಸೂಚಿಯನ್ನು ಒದಗಿಸಿದ್ದು, ಅನುಷ್ಠಾನಕ್ಕೆ ಹಲವಾರು ದೃಢವಾದ ಕಾರ್ಯತಂತ್ರಗಳನ್ನು ವಿವರಿಸಿದೆ. ಅವುಗಳೆಂದರೆ: ಸಾಂಸ್ಥಿಕ ವ್ಯವಸ್ಥೆಗಳಲ್ಲಿ ರಚನಾತ್ಮಕ ಬದಲಾವಣೆಗಳು; ಶಾಲಾ ಮತ್ತು ಶಿಕ್ಷಕರ ಶಿಕ್ಷಣ ಕ್ಷೇತ್ರಕ್ಕೆ ಹೊಸ ಪ್ರತಿಭೆಗಳನ್ನು ಆಕರ್ಷಿಸುವುದು; ವೈವಿಧ್ಯತೆಯನ್ನು ಹೆಚ್ಚಿಸಲು ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳ ಪಠ್ಯಕ್ರಮದ ಮರುವಿನ್ಯಾಸ; ಜ್ಞಾನ ಮತ್ತು ಕಲಿಕೆಯನ್ನು ಭಾರತೀಯ ಸಮಾಜಕ್ಕೆ ಸಂದರ್ಭೋಚಿತವಾಗಿ ಮತ್ತು ತಳಮಟ್ಟದ ಗಮನಾರ್ಹ ಬದಲಾವಣೆಗಳನ್ನು ಶಕ್ತಗೊಳಿಸಲು ಸೂಕ್ತವಾದ ನಿಯಂತ್ರಕ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸುವುದು.

ಉದಾಹರಣೆಯಾಗಿ, ನ್ಯಾಯಮೂರ್ತಿ ವರ್ಮಾ ಆಯೋಗವು (ಜೆವಿಸಿ) "ಶಿಕ್ಷಕರನ್ನು ತಯಾರಿ ಮಾಡಲು ಅಗತ್ಯವಾದ ಸಾಮರ್ಥ್ಯವನ್ನು ಹೆಚ್ಚಿಸುವುದರ ಹೊರತಾಗಿ, ಸೇವಾಪೂರ್ವ ಕಾರ್ಯಕ್ರಮಗಳಿಗೆ ಪಠ್ಯಕ್ರಮ ಮತ್ತು ಸಾಂಸ್ಥಿಕ ವಿನ್ಯಾಸದಲ್ಲಿ ಆಮೂಲಾಗ್ರ ಬದಲಾವಣೆಯ ಅಗತ್ಯವಿದೆ" ಎಂದು ಪ್ರತಿಪಾದಿಸುತ್ತದೆ. ಅವುಗಳ 'ಏಕಾಂಗಿ' ಸ್ವಭಾವದ ಪರಿಣಾಮವಾಗಿ, ಅಶಿಸಂ (ಟಿಇಐ) ಗಳು ಜ್ಞಾನ ಉತ್ಪಾದನೆಯ ಚಟುವಟಿಕೆಗಳಿಂದ ಮತ್ತು ಸಂಶೋಧನೆ ಮತ್ತು ಅಂತರ್‌ಶಿಸ್ತೀಯ ಅಧ್ಯಯನಗಳ ಸಂಸ್ಕೃತಿಯಿಂದ ಬೇರ್ಪಟ್ಟಿವೆ. ಆದ್ದರಿಂದ ಹೊಸ ಶಿಕ್ಷಕ ಶಿಕ್ಷಣ ಸಂಸ್ಥೆಗಳು ಬಹು ಮತ್ತು ಅಂತರ್‌ಶಿಸ್ತೀಯ ಶೈಕ್ಷಣಿಕ ವಾತಾವರಣದಲ್ಲಿ ನೆಲೆಗೊಂಡಿರುವುದು ಅಪೇಕ್ಷಣೀಯವಾಗಿದೆ. ನ್ಯಾಯಮೂರ್ತಿ ವರ್ಮಾ ಆಯೋಗದ (ಜೆವಿಸಿ) ಮೂರು ಶಿಫಾರಸುಗಳನ್ನು ಪರಿಹರಿಸಲು ನಿರ್ಣಾಯಕ ಮಾರ್ಗ ಅಂದರೆ.(ಎ) ಸರ್ಕಾರದ ಹೂಡಿಕೆಯನ್ನು ಹೆಚ್ಚಿಸಿ ಮತ್ತು (ಬಿ) ಉತ್ತಮ ಗುಣಮಟ್ಟದ ಶಿಕ್ಷಕರನ್ನು ಸಾಮಾನ್ಯ ಮತ್ತು ವೃತ್ತಿಪರ ಶಿಕ್ಷಣದ ಸಮಗ್ರ ಕಾರ್ಯಕ್ರಮಗಳ ಮೂಲಕ ಸಿದ್ಧಪಡಿಸುವುದು ಮತ್ತು (ಸಿ) ಶಾಲೆ ಮತ್ತು ಶಾಲಾ ಅಧ್ಯಾಪಕರ ಬೌದ್ಧಿಕ ಒಂಟಿತನವನ್ನು ತೆಗೆದುಹಾಕಲು ಮಾಧ್ಯಮಿಕ ಮತ್ತು ಪ್ರಾಥಮಿಕ ಶಿಕ್ಷಣದ, ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳನ್ನು (ಟಿಇಪಿ) ಮಾನವಿಕ ಶಾಸ್ತ್ರಗಳು ಮತ್ತು ವಿಜ್ಞಾನದಲ್ಲಿ ಸ್ನಾತಕ ಪದವಿ ಅಧ್ಯಯನವನ್ನು ಒದಗಿಸುವ ವಿಶ್ವವಿದ್ಯಾಲಯ ಆಧಾರಿತ ಕಾಲೇಜುಗಳಲ್ಲಿ ನೆಲೆಗೊಳಿಸುವುದು.

ದೇಶದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗೆ ತರಬೇತಿ ನೀಡುವ 16,000 ಕ್ಕೂ ಹೆಚ್ಚು ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ(ಎನ್‌ಸಿಟಿಇ) ಮಾನ್ಯತೆ ಪಡೆದ ಅಶಿಸಂ (ಟಿಇಐ)ಗಳಿವೆ. ಈ ಪೈಕಿ, ಪ್ರಾಥಮಿಕ ಶಿಕ್ಷಕರಿಗೆ ತರಬೇತಿ ನೀಡುವ ಅರ್ಧದಷ್ಟು ಶಿಕ್ಷಕರ ಶಿಕ್ಷಣ ಕಾರ್ಯಕ್ರಮ (ಟಿಇಪಿ)ಗಳು ವಿಶ್ವವಿದ್ಯಾಲಯ ವ್ಯವಸ್ಥೆಯಿಂದ ಹೊರಗಿವೆ. ಇದಕ್ಕೆ ಹೋಲಿಸಿದರೆ, ಯುಜಿಸಿಯ ಅಂಗೀಕೃತ ಮತ್ತು ಘಟಕ ಕಾಲೇಜುಗಳ ದತ್ತಸಂಚಯ ದೇಶಾದ್ಯಂತ 35,000 ಕ್ಕೂ ಹೆಚ್ಚು ಮಾನವಿಕ ಶಾಸ್ತ್ರ ಮತ್ತು ವಿಜ್ಞಾನ ಕಾಲೇಜುಗಳಿವೆ ಎಂದು ಸೂಚಿಸುತ್ತದೆ. ಶಿಕ್ಷಕರ ತುರ್ತು ಅಗತ್ಯವಿರುವ ಆದರೆ ಅಶಿಸಂ (ಟಿಇಐ) ಗಳ ಕೊರತೆ ಇರುವ ರಾಜ್ಯಗಳು ಹೆಚ್ಚಿನ ಸಂಖ್ಯೆಯ ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ನೀಡಬಲ್ಲ ಪದವಿ ಕಾಲೇಜುಗಳನ್ನು ಉಪಯೋಗಿಸಿಕೊಳ್ಳಬಹುದು.

---

[4] 14 / 16.5.2013 ರ ಆದೇಶಕ್ಕೆ ಅನುಸಾರವಾಗಿ ಅನುಷ್ಠಾನ ಸಮಿತಿಯನ್ನು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ರಚಿಸಿತು. ವರ್ಮಾ ಆಯೋಗದ ಶಿಫಾರಸುಗಳನ್ನು ಜಾರಿಗೆ ತರಲು ಅನುಷ್ಠಾನ ಸಮಿತಿ ಸಮಗ್ರ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿತು. ಎಸ್‌ಎಲ್‌ಪಿ (ಸಿ) ನಂ. 2399-2400/ 2009 ರಲ್ಲಿ ಭಾರತದ ಸುಪ್ರೀಂ ಕೋರ್ಟ್ ಹೊರಡಿಸಿದ 10/9/2013 ರ ಆದೇಶ ಮತ್ತು ಹಲವಾರು ರಜೆ ಅರ್ಜಿಗಳೊಂದಿಗೆ, ಹೊಸ ನಿಯಮಗಳನ್ನು 30/11/2013 ರೊಳಗೆ ತಿಳಿಸುವಂತೆ ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ (ಎನ್‌ಸಿಟಿಇ)ಗೆ ನಿರ್ದೇಶನ ನೀಡಿತು. ನಂತರ ದಿನಾಂಕವನ್ನು ನವೆಂಬರ್ 2014 ರವರೆಗೆ ವಿಸ್ತರಿಸಿದೆ. ಅನುಷ್ಠಾನ ಸಮಿತಿ (ಐಸಿ) ಮಾಡಿದ ಎಲ್ಲಾ ಶಿಫಾರಸುಗಳಿಗೆ ಭಾರತ ಸರ್ಕಾರ, ಎಲ್ಲಾ ರಾಜ್ಯಗಳ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತ ಮತ್ತು ಎನ್‌ಸಿಟಿಇ, ವಿಶ್ವವಿದ್ಯಾಲಯ ಅನುದಾನ ಆಯೋಗ ಬದ್ಧವಾಗಿರಬೇಕು ಎಂದು ಭಾರತದ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಅನುದಾನ ಆಯೋಗ ಮತ್ತು ಅವೆಲ್ಲವೂ ಯಾವುದೇ ಆಕ್ಷೇಪಣೆಗಳಿಲ್ಲದೆ ಮತ್ತು ಯಾವುದೇ ಮಾರ್ಪಾಡು ಮಾಡದೆ ಕಾರ್ಯಗತಗೊಳಿಸುತ್ತವೆ '.

ಕೊರತೆಯಿರುವ ಹದಿನಾಲ್ಕು ರಾಜ್ಯಗಳಿಗೆ ಮಾತ್ರ ವಾರ್ಷಿಕವಾಗಿ ಸುಮಾರು 19,000 ಶಿಕ್ಷಕ ಶಿಕ್ಷಕರ ಹೆಚ್ಚುವರಿ ಸಾಮರ್ಥ್ಯದ ಅಗತ್ಯವಿದೆ. ನ್ಯಾಯಮೂರ್ತಿ ವರ್ಮಾ ಆಯೋಗ (ಜೆವಿಸಿ) ಮತ್ತು XII ಯೋಜನಾ ಕಾರ್ಯನಿರತ ಗುಂಪು (ಪ್ಲಾನ್ ವರ್ಕಿಂಗ್ ಗ್ರೂಪ್ - ಡಬ್ಲ್ಯುಜಿ) ಶಿಕ್ಷಕ ಶಿಕ್ಷಣ ತಜ್ಞರ ಭಾರಿ ಕೊರತೆಯನ್ನು ತುಂಬಲು ಅನೇಕ ನಿಶ್ಚಿತ ಪರಿಹಾರ ಮಾರ್ಗಗಳನ್ನು ಸೂಚಿಸಿತ್ತು.ಅವುಗಳಲ್ಲಿ (ಎ) ವಾರ್ಷಿಕ ದಾಖಲಾತಿಯನ್ನು ಹೆಚ್ಚಿಸುವ ಮೂಲಕ ಅಸ್ತಿತ್ವದಲ್ಲಿರುವ ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು. (ಬಿ) ಸ್ನಾತಕೋತ್ತರ ಶಿಕ್ಷಣ (ಎಂಇಡಿ) ಕಾರ್ಯಕ್ರಮಗಳನ್ನು ನೀಡಲು ವಿಶ್ವವಿದ್ಯಾಲಯಗಳಲ್ಲಿ ಸಾಮರ್ಥ್ಯವನ್ನು ಸೃಷ್ಟಿಸುವುದು (ಸಿ) ಶಿಕ್ಷಕ ಶಿಕ್ಷಕರಿಗೆ ಅರ್ಹತಾ ಮಾನದಂಡಗಳನ್ನು ವೈವಿಧ್ಯಗೊಳಿಸುವುದು.

ಆದ್ದರಿಂದ ಶಿಕ್ಷಕ ಶಿಕ್ಷಣತಜ್ಞರಿಗೆ ಅಗತ್ಯವಾದ ಅರ್ಹತಾ ಚೌಕಟ್ಟನ್ನು ವಿಸ್ತಾರತೆಯ ಆಧಾರದಲ್ಲಿ ಮಾಡಬೇಕೆಂದು ನ್ಯಾಯಮೂರ್ತಿ ವರ್ಮಾ ಆಯೋಗವು (ಜೆವಿಸಿ) ಶಿಫಾರಸು ಮಾಡಿದೆ, ಇದು ಶಿಕ್ಷಕ ಶಿಕ್ಷಕರಾಗಿ ತಜ್ಞರಾದ ಅಧ್ಯಾಪಕರ ಪ್ರವೇಶವನ್ನು ಖಚಿತಪಡಿಸುತ್ತದೆ. ಅಗತ್ಯ ಅರ್ಹತೆಯಾಗಿ ಸ್ನಾತಕೋತ್ತರ ಶಿಕ್ಷಣ (ಎಂಇಡಿ)ವನ್ನು 'ನಿರ್ಬಂಧಿತ ಮಾನದಂಡ' ಎನ್ನುವ ನೆಲೆಯಲ್ಲಿ ಪರಿಶೀಲಿಸುವ ಅಗತ್ಯವಿದೆ ಎಂದು XII ಯೋಜನೆ ಯೋಜನಾ ಕಾರ್ಯನಿರತ ಗುಂಪು (ಡಬ್ಲ್ಯುಜಿ) ಗಮನಿಸಿದೆ (ಎ) ಅಗತ್ಯವಿರುವ ಶಿಕ್ಷಕ ಶಿಕ್ಷಕರ ಕೌಶಲ್ಯಗಳು ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್‌ಟಿಇ), 2009 ರ, ಚೌಕಟ್ಟಿನೊಳಗೆ ಪರಿಷ್ಕೃತ ಪಠ್ಯಕ್ರಮದ ಬೇಡಿಕೆಗಳು; ಮತ್ತು (ಬಿ) ಶಿಕ್ಷಕರ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಅಭ್ಯಾಸಗಳಂತೆ ... ವಿವಿಧ ವಿಭಾಗಗಳ ವ್ಯಕ್ತಿಗಳು ಶಿಕ್ಷಕ ಶಿಕ್ಷಕರಾಗಲು ಪರ್ಯಾಯ ಮಾರ್ಗಗಳನ್ನು ನೀಡುವುದು ಕೇಂದ್ರ ಕಲ್ಪನೆ. '

ನ್ಯಾಯಮೂರ್ತಿ ವರ್ಮಾ ಆಯೋಗವು (ಜೆವಿಸಿ) ಕೂಡ ಈ ಬಗ್ಗೆ ಸ್ಪಷ್ಟ ಅಭಿಪ್ರಾಯಗಳನ್ನು ಹೊಂದಿದೆ. ಆಯೋಗವು ನಿಸ್ಸಂದಿಗ್ಧವಾಗಿ "ಅಧ್ಯಾಪಕ ಶಿಕ್ಷಕರ ಸಜ್ಜುಗೊಳಿಸುವಿಕೆಯು ಸೇವಾಪೂರ್ವ ಶಿಕ್ಷಕರ ಶಿಕ್ಷಣದ ಗುಣಮಟ್ಟವನ್ನು ಖಾತರಿಪಡಿಸುವಲ್ಲಿ ದುರ್ಬಲ ಕೊಂಡಿಯಾಗಿ ಉಳಿದಿದೆ. ಆದ್ದರಿಂದ, ಅಧ್ಯಾಪಕ ಶಿಕ್ಷಕರ ಪ್ರೊಫೈಲ್‌ನ(ಸ್ವ-ವಿವರ) ವಿಷಯವು ಈಗ ಅಸ್ತಿತ್ವದಲ್ಲಿರುವ ವಿಷಯದ ಚಿಂತನೆಯನ್ನು ಮೀರಿ ಸರಿಯಾದ ಗಮನವನ್ನು ಪಡೆಯಬೇಕು"(ಪು. 17). ಫೌಂಡೇಶನ್ ಕೋರ್ಸ್‌ಗಳ ಬೋಧನೆಗಾಗಿ ಸಾಮಾಜಿಕ ವಿಜ್ಞಾನದಲ್ಲಿ ಬಲವಾದ ತಳಪಾಯವನ್ನು ಶಿಫಾರಸು ಮಾಡುವಾಗ, ಶಿಕ್ಷಣ ಶಿಕ್ಷಕರ ನೇಮಕಾತಿಗೆ ಸ್ನಾತಕೋತ್ತರ ಪದವಿ (ಎಂಇಡಿ)ಯು ಅರ್ಹತೆ ಎಂಬ ಈಗಿನ ಸಾಂಸ್ಥಿಕ ಮಾನದಂಡವು ಸೀಮಿತವಾದದ್ದು ಮತ್ತು ಬದಲಾಗಬೇಕಾದದ್ದು ಎಂದು ಅದು ಗಮನಿಸುತ್ತದೆ.

ಪ್ರಮುಖ ಮತ್ತು ಮೂಲಭೂತ ಜ್ಞಾನಶಿಸ್ತುಗಳಲ್ಲಿ ಸೈದ್ಧಾಂತಿಕ ಮತ್ತು ಜ್ಞಾನಶಾಸ್ತ್ರೀಯವಾದ ಆಳ ಅರಿವು ಇರುವ ಬಹು ಮತ್ತು ಅಂತರಶಿಸ್ತೀಯ ಅಧ್ಯಾಪಕರನ್ನು ಶಿಕ್ಷಕ ಶಿಕ್ಷಕರನ್ನಾಗಿ ಮಾಡಲು ಅನುವು ಮಾಡಿಕೊಡುವುದು ಶೈಕ್ಷಣಿಕ ಸಿದ್ಧಾಂತ ಮತ್ತು ಅಭ್ಯಾಸದ ವಿಷಯಗಳೊಂದಿಗೆ ವ್ಯಾಪಕ ಮತ್ತು ಆಳವಾಗಿ ತೊಡಗಿಸಿಕೊಳ್ಳುವುದಕ್ಕೆ ಅವಕಾಶವನ್ನು ಒದಗಿಸುತ್ತದೆ. ಆದ್ದರಿಂದ, ಉನ್ನತ ಶಿಕ್ಷಣದೊಂದಿಗಿನ ಸಂಪರ್ಕಗಳು ಆಳ ಮತ್ತು ಅಗಲದಿಂದ ಕೂಡಿರುವ ಸಾಧ್ಯತೆಯಿದೆ ಎಂಬುದು ನ್ಯಾಯಮೂರ್ತಿ ವರ್ಮಾ ಆಯೋಗದ (ಜೆವಿಸಿ) ಶಿಫಾರಸು.

'ಸ್ನಾತಕೋತ್ತರ ಪದವಿಯ (ಎಂಇಡಿ) ಕಾರ್ಯಕ್ರಮವು ಎರಡು ವರ್ಷಗಳ ಕಾರ್ಯಕ್ರಮವಾಗಬೇಕು. ಅದರಲ್ಲಿ ಪಠ್ಯಕ್ರಮದ ಅಧ್ಯಯನಗಳು; ಶಿಕ್ಷಣ ಅಧ್ಯಯನಗಳು; ನೀತಿ, ಹಣಕಾಸು ಮತ್ತು ಮೂಲ ಅಧ್ಯಯನಗಳಂತಹ ವಿಶೇಷ ತಜ್ಞತೆಯ ವಿಷಯಗಳ ವಿಭಾಗಗಳಿಗೆ ಸಾಕಷ್ಟು ಅವಕಾಶ ಇರಬೇಕು' ಎನ್ನುವುದು ನ್ಯಾಯಮೂರ್ತಿ ವರ್ಮಾ ಆಯೋಗ(ಜೆವಿಸಿ)ದ ಸ್ಪಷ್ಟ ಅಭಿಪ್ರಾಯ. ಇದು ಈಗಾಗಲೇ ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ (ಎನ್‌ಸಿಟಿಇ)ಯು 2014 ರಲ್ಲಿ ಹೊರಡಿಸಿದ ಹೊಸ ಮಾನದಂಡಗಳ ಅಧಿಸೂಚನೆಯೊಂದಿಗೆ ಜಾರಿಗೆ ಬಂದಿದೆ. ಸ್ನಾತಕೋತ್ತರ ಪದವಿ (ಎಂಇಡಿ) ಕಾರ್ಯಕ್ರಮವನ್ನು ಮತ್ತಷ್ಟು ಬಲಪಡಿಸಲು, ಆಯೋಗವು 'ಶಿಕ್ಷಕರ ಶಿಕ್ಷಣ ಮಾರ್ಗದ ಹೊರತಾಗಿ ಶೈಕ್ಷಣಿಕ ಅಧ್ಯಯನಗಳನ್ನು ಕೈಗೊಳ್ಳಲು ಬಯಸುವವರಿಗೆ ನೇರ ಪ್ರವೇಶವನ್ನು ಒದಗಿಸಬೇಕಾಗಿದೆ' ಎಂದು ಶಿಫಾರಸು ಮಾಡಿದೆ. ಸಾಮಾಜಿಕ ವಿಜ್ಞಾನ, ಮಾನವಿಕ ಮತ್ತು ವಿಜ್ಞಾನದ ವಿವಿಧ ವಿಭಾಗಗಳಲ್ಲಿ ಪದವೀಧರರು ಮತ್ತು ಸ್ನಾತಕೋತ್ತರ ಪದವೀಧರರಿಗಾಗಿ ಶಿಕ್ಷಣ ಸ್ನಾತಕೋತ್ತರ ಪದವಿ (ಎಂಇಡಿ) ತೆರೆಯುವುದು (ಶಿಕ್ಷಕರಾಗಲು ಅರ್ಹತೆಯನ್ನು ಪಡೆದುಕೊಳ್ಳದೆ) ಶಿಕ್ಷಕರ ಶಿಕ್ಷಕರಾಗಲು ಪ್ರತಿಭೆಗಳ ಕಣಜವನ್ನು ವಿಸ್ತರಿಸುವ ಸಾಧ್ಯತೆಯಿದೆ.

ಪಠ್ಯಕ್ರಮದ ವಿನ್ಯಾಸ, ಶಿಕ್ಷಣದ ಗುರಿಗಳು, ಕಲಿಯುವವರು, ಜ್ಞಾನ ಮತ್ತು ಕಲಿಕೆಯ ಪ್ರಶ್ನೆಗಳೊಂದಿಗೆ ತೊಡಗಿಸಿಕೊಳ್ಳುವ ಸಾಮರ್ಥ್ಯವನ್ನು

ಹೊಂದಿರುವ ಶಿಕ್ಷಕ ಶಿಕ್ಷಕರು ನಮಗೆ ಬೇಕು ಎಂಬ ತಿಳುವಳಿಕೆಯಿಂದ ಇದು ಬರುತ್ತದೆ. ಇದು ಕೇವಲ ಬೋಧನೆಯ ಅಭ್ಯಾಸದಿಂದ ಮಾತ್ರ ಬರುವಂಥದ್ದಲ್ಲ. ಇದಕ್ಕೆ ಮೂಲ ಜ್ಞಾನಶಿಸ್ತುಗಳೊಂದಿಗೆ ಕಠಿಣ ಸೈದ್ಧಾಂತಿಕ ತೊಡಗಿಸಿಕೊಳ್ಳುವಿಕೆಯ ಅಗತ್ಯವಿರುತ್ತದೆ.

ಉದ್ದೇಶಿತ ಪರಿಷ್ಕೃತ ನಿಬಂಧನೆಗಳ ಬಗ್ಗೆ ಹಲವಾರು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವ ಶಿಕ್ಷಣತಜ್ಞರು ಶಿಕ್ಷಣ ಜ್ಞಾನಶಾಖೆಯನ್ನು ಕಾಪಾಡುವ ನೆಲೆಯಲ್ಲಿ ವ್ಯಕ್ತಪಡಿಸಿರುವ ಆತಂಕ ಸಮರ್ಪಕವಾಗಿ ನಿವಾರಣೆ ಆಗಬೇಕಿದ್ದರೆ ಪ್ರಗತಿಪರ ಬೋಧನಾಶಾಖೆಯಂತಿರುವ ಶಿಕ್ಷಣದ ಅಧ್ಯಯನವನ್ನು ವೃತ್ತಿಪರ ಅನುಸರಣೆಯಂತಿರುವ ಶಿಕ್ಷಣದ ಅಧ್ಯಯನ ಮತ್ತು ಅಭ್ಯಾಸದೊಂದಿಗೆ ಸಂಯೋಜಿಸುವ ಪ್ರಯತ್ನಗಳಾಗಬೇಕು. ಇದನ್ನು ಎರಡು ವಿಧಗಳಲ್ಲಿ ಉತ್ತಮವಾಗಿ ಮಾಡಬಹುದು: ಮೊದಲನೆಯದಾಗಿ, ಶಿಕ್ಷಣದ ಅನ್ವೇಷಣೆಯ ನಡುವಿನ ಕೃತಕ ವ್ಯತ್ಯಾಸವನ್ನು ಕಡಿಮೆ ಮಾಡುವ ಮೂಲಕ ಪ್ರಗತಿಪರ ಅಧ್ಯಯನವಾಗಿ ಮತ್ತೊಂದು ವೃತ್ತಿಪರ ಅಧ್ಯಯನವಾಗಿ. ಇದಕ್ಕೆ ಶಿಕ್ಷಣದ 'ವೃತ್ತಿಪರ' ಮತ್ತು 'ಪ್ರಗತಿಪರ' ಘಟಕಗಳು ಎಂದು ಕರೆಯಲು ಅವುಗಳ (ಅರ್ಹತೆ ಹೊಂದಿರುವ) ಘಟಕಗಳು, ಸಮಸ್ಯೆಗಳು, ಕಾಳಜಿಗಳು ಮತ್ತು ವಿಧಾನಗಳ ಬಗ್ಗೆ ಸಹಯೋಗದ ಚಿಂತನೆ ಮತ್ತು ಸಾಮರಸ್ಯದ ರಚನೆಯ ಅಗತ್ಯವಿರುತ್ತದೆ ಎಂದು ಉತ್ತಮವಾಗಿ ವಿವರಿಸಬಹುದು. ಶಿಕ್ಷಣದ ಸ್ನಾತಕೋತ್ತರ ಪದವಿ (ಎಂಇಡಿ) ಕಾರ್ಯಕ್ರಮಕ್ಕಾಗಿ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವ ಮಟ್ಟದಲ್ಲಿ ಇದು ಪರಿಹರಿಸಬೇಕಾದ ವಿಷಯವಾಗಿದೆ.

ಶಿಕ್ಷಣದ ಸಿದ್ಧಾಂತ ಮತ್ತು ಅಭ್ಯಾಸವನ್ನು ಉತ್ಕೃಷ್ಟಗೊಳಿಸಲು ವೃತ್ತಿಪರ ಮತ್ತು ಉದಾರವಾದಿಗಳು ಪರಸ್ಪರ ತಿಳಿಸುವ ಅವಶ್ಯಕತೆಯಿದೆ ಎಂದು ನಾವು ಒಪ್ಪಿದರೆ, ಸಾಮಾಜಿಕ ವಿಜ್ಞಾನ, ವಿಜ್ಞಾನ, ಗಣಿತ ಮತ್ತು ಮಾನವಿಕ ವಿದ್ಯಾರ್ಥಿಗಳಿಗೆ ಶಿಕ್ಷಕರ ಶಿಕ್ಷಣದಲ್ಲಿ ಪದವಿಯನ್ನು ಪಡೆಯದೆ ಶೈಕ್ಷಣಿಕ ಅಧ್ಯಯನವನ್ನು (ಸ್ನಾತಕೋತ್ತರ ಮತ್ತು ಸಂಶೋಧನೆ) ಮುಂದುವರಿಸಲು ನಾವು ಅನುವು ಮಾಡಿಕೊಡುವುದು ಅತ್ಯಗತ್ಯ. ಶಿಕ್ಷಕ ಶಿಕ್ಷಣದ ಕಾರ್ಯಕ್ರಮಗಳಲ್ಲಿ ಬೋಧಿಸಲು; ಶಾಲೆಗಳು ಮತ್ತು ಇತರ ವ್ಯವಸ್ಥೆಗಳಲ್ಲಿ ಅದರ ಅಭ್ಯಾಸದಿಂದ ಹೊರಹೊಮ್ಮುವ ಶಿಕ್ಷಣದ ಸಮಸ್ಯೆಗಳನ್ನು ಸಂಶೋಧಿಸಲು ವಿವಿಧ ವಿಭಾಗಗಳಲ್ಲಿ ತರಬೇತಿ ಪಡೆದ ಅಧ್ಯಾಪಕರ ಭಾಗವಹಿಸುವಿಕೆಯನ್ನು ನಾವು ಆಹ್ವಾನಿಸುವುದು ಅಷ್ಟೇ ಅತ್ಯಗತ್ಯ.

ಹೊಸ ಶಿಕ್ಷಣ ನೀತಿ ಪ್ರಸ್ತಾವನೆ (2016) ಶಾಲಾ ಶಿಕ್ಷಕರ ಸನ್ನದ್ಧತೆಯ ಕೆಲವು ನಿರ್ಣಾಯಕ ಅಂತರಗಳನ್ನು ಅರಿತುಕೊಳ್ಳುತ್ತದೆ, ಅವುಗಳೆಂದರೆ 'ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ವೃತ್ತಿಪರತೆಯ ಕೊರತೆ, ತರಬೇತಿ ಮತ್ತು ಅಭ್ಯಾಸದ ನಡುವೆ ಹೊಂದಾಣಿಕೆ ಇಲ್ಲದಿರುವುದು, ಬೋಧಕೇತರ ಚಟುವಟಿಕೆಗಳಲ್ಲಿ ಶಿಕ್ಷಕರ ಪಾಲ್ಗೊಳ್ಳುವಿಕೆ, ತರಬೇತಿ ಪಡೆಯದ ಶಿಕ್ಷಕರ ಸಮಸ್ಯೆಗಳು, ಶಿಕ್ಷಕರ ಕೊರತೆ, ಶಿಕ್ಷಕರ ಗೈರುಹಾಜರಿ ಮತ್ತು ಶಿಕ್ಷಕರ ಹೊಣೆಗಾರಿಕೆ.' ಆದಾಗ್ಯೂ, ಶಿಕ್ಷಕರ ಶಿಕ್ಷಣ ಕ್ಷೇತ್ರದಲ್ಲಿ ಈ ಪ್ರತಿಯೊಂದು ಪ್ರಮುಖ ಅಂತರಗಳ ಬಗ್ಗೆ ಶಿಕ್ಷಕರ ಶಿಕ್ಷಣಕ್ಕೆ (2012) ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೇಮಕ ಮಾಡಿದ ನ್ಯಾಯಮೂರ್ತಿ ವರ್ಮಾ ಆಯೋಗ (ಜೆವಿಸಿ)ದ ನಿರ್ಣಾಯಕ ಶಿಫಾರಸುಗಳ ಬಗ್ಗೆ ಇದು ವಿವರಿಸಲಾಗದ ಮೌನವನ್ನು ವಹಿಸುತ್ತದೆ.

ನ್ಯಾಯಮೂರ್ತಿ ವರ್ಮಾ ಆಯೋಗದ (ಜೆವಿಸಿ) ಶಿಫಾರಸುಗಳ ಆಧಾರದ ಮೇಲೆ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳ ನಿಯಂತ್ರಕ ಮಾನದಂಡಗಳು ಮತ್ತು ಮಾನದಂಡಗಳ ಪ್ರಮುಖ ಪರಿಷ್ಕರಣೆಯನ್ನು 2014 ರ ನವೆಂಬರ್‌ನ ಭಾರತೀಯ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ - ಇದು ಭಾರತದ ಸುಪ್ರೀಂ ಕೋರ್ಟ್‌ನ ಕಟ್ಟುನಿಟ್ಟಿನ ನಿರ್ದೇಶನದ ಮೇರೆಗೆ ನ್ಯಾಯಮೂರ್ತಿ ವರ್ಮಾ ಆಯೋಗ (ಜೆವಿಸಿ) 2012 ರಲ್ಲಿ ಶಿಫಾರಸುಗಳನ್ನು ಸಂಪೂರ್ಣವಾಗಿ ಸ್ವೀಕರಿಸಲಾಗಿದೆ. ಇದರ ಬಗೆಗೂ ಯಾವುದೇ ಗಮನ ಇಲ್ಲ.

ಶಿಕ್ಷಕರಲ್ಲಿ ವೃತ್ತಿಪರತೆಯನ್ನು ಹೆಚ್ಚಿಸಲು ಮತ್ತು ಅವರ ಸಾಮರ್ಥ್ಯ ನಿರ್ಮಾಣಕ್ಕೆ ಇದು ಪ್ರಸ್ತಾಪಿಸುವ ಏಕೈಕ ಶೈಕ್ಷಣಿಕ ತಂತ್ರವೆಂದರೆ ರಾಷ್ಟ್ರೀಯ ಮಟ್ಟದ ಶಿಕ್ಷಕ ಶಿಕ್ಷಣ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಶಿಫಾರಸಾಗಿದೆ, ಈ ಪರಿಕಲ್ಪನೆಯು ನ್ಯಾಯಮೂರ್ತಿ ವರ್ಮಾ ಆಯೋಗದ (ಜೆವಿಸಿ) ಚರ್ಚೆಯ ಸಮಯದಲ್ಲಿ ಪ್ರತಿವಾದಿಸಲ್ಪಟ್ಟಿದೆ. ಅಂತಹ ಕ್ರಮವು ನ್ಯಾಯಮೂರ್ತಿ ವರ್ಮಾ ಆಯೋಗ (ಜೆವಿಸಿ) ವಿರೋಧಿಸಿದ ಏಕಾಂಗಿ ಸಂಸ್ಥೆಗಳ ಮೂಲಕ ಶಿಕ್ಷಕರನ್ನು ಬೌದ್ಧಿಕ ಶೂನ್ಯರಾಗಿ ಸಿದ್ಧಪಡಿಸುವ ಸಮಸ್ಯೆಯನ್ನು ಹೆಚ್ಚಿಸುತ್ತದೆ. ಕರಡು ನೀತಿಯ ಕೇಂದ್ರ ಗಮನವು ಶಿಕ್ಷಕರನ್ನು ಜವಾಬ್ದಾರರನ್ನಾಗಿ ಮಾಡುವ ಮತ್ತು ಕಾರ್ಯಕ್ಷಮತೆಯುಳ್ಳವರನ್ನಾಗಿ ಮಾಡುವ ಕಡೆಗೆ ಇದೆ. ಮೊಬೈಲ್ ಫೋನ್‌ಗಳು ಮತ್ತು ಬಯೋಮೆಟ್ರಿಕ್ ಸಾಧನಗಳೊಂದಿಗೆ ಹಾಜರಾತಿಯನ್ನು ದಾಖಲಿಸುವಂತಹ ತಂತ್ರಜ್ಞಾನದ ನೆರವಿನೊಂದಿಗೆ ಹೊಣೆಗಾರಿಕೆಯ ಕ್ರಮಗಳನ್ನು ಕೈಗೊಳ್ಳುವ ಮೂಲಕ 'ಶಿಕ್ಷಕರ ಗೈರುಹಾಜರಿ

ಮತ್ತು ಅಶಿಸ್ತ'ನ್ನು ಹೇಗೆ ಎದುರಿಸಬಹುದು ಎಂದು ಅದು ಶಿಫಾರಸು ಮಾಡುತ್ತದೆ; ಶಿಕ್ಷಕರ ಆವರ್ತಕ ಮೌಲ್ಯಮಾಪನವನ್ನು ಕಡ್ಡಾಯಗೊಳಿಸಿ, ಅದರ ಜತೆಗೆ ಅವರ ಭವಿಷ್ಯದ ಭಡ್ತಿಗಳು ಮತ್ತು ವೇತನದಲ್ಲಿ ಏರಿಕೆಗಳ ಬಿಡುಗಡೆಯನ್ನೂ ಜೋಡಿಸಲಾಗುತ್ತದೆ. ಶಾಲೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಸ್ಥಾಪಿಸುವಂತಹ ಹೊಣೆಗಾರಿಕೆ ಕಾರ್ಯವಿಧಾನಗಳು ಹೇಗೆ ಶಿಕ್ಷಕರು ತಮ್ಮ ಕೆಲಸದ ವಿಸ್ತಾರವಾದ ದಾಖಲೀಕರಣಗಳನ್ನು ನಿರ್ವಹಿಸಲು ಒತ್ತಾಯಿಸುವುದು ಎಂದು ಅಂತರರಾಷ್ಟ್ರೀಯ ಸಂಶೋಧನೆಗಳು ತೋರಿಸಿಕೊಟ್ಟಿವೆ; ನಿರಂತರ ಕಣ್ಗಾವಲು ಮತ್ತು ನಿಯಂತ್ರಣಕ್ಕೆ ಅವರನ್ನು ಒಳಪಡಿಸುವುದು, ಶಾಲೆಗಳು ಮತ್ತು ತರಗತಿ ಕೋಣೆಗಳಲ್ಲಿ ಅವರ ಕೆಲಸವನ್ನು ಗಂಭೀರವಾಗಿ ಹಾಳುಮಾಡಿದೆ. ಶಿಕ್ಷಕರನ್ನು ತಯಾರಿಸಲು ಸಾಂಸ್ಥಿಕ ಸಾಮರ್ಥ್ಯದ ಕೊರತೆಯಿಂದಾಗಿ ಹಲವಾರು ರಾಜ್ಯಗಳು ಶಿಕ್ಷಕರ ಕೊರತೆಯನ್ನು ತೀವ್ರವಾಗಿ ಎದುರಿಸುತ್ತಿವೆ. ಈ ರಾಜ್ಯಗಳಲ್ಲಿ ಹಲವು ಶಿಕ್ಷಕರನ್ನು ಗುತ್ತಿಗೆಗೆ ಸೇರಿಸಿಕೊಳ್ಳಲು ಆಯ್ಕೆ ಮಾಡಿಕೊಂಡಿವೆ ಮತ್ತು ಆರ್‌ಟಿಇ ಕಾಯ್ದೆಯಿಂದ ಕಡ್ಡಾಯವಾಗಿರುವ ಅವರ ಅಗತ್ಯ ಅರ್ಹತೆಗಳಲ್ಲಿ ರಾಜಿ ಮಾಡಿಕೊಂಡಿವೆ. ನ್ಯಾಯಮೂರ್ತಿ ವರ್ಮಾ ಆಯೋಗವು ಗಮನಿಸುವಂತೆ, ಶಿಕ್ಷಕರಾಗಲು ಅರ್ಹತೆ ಪಡೆದವರಲ್ಲಿ ಹೆಚ್ಚಿನವರು ವೈವಿಧ್ಯಮಯ ತರಗತಿ ಕೋಣೆಗಳ ಶಿಕ್ಷಣದ ಅಗತ್ಯಗಳನ್ನು ಪರಿಹರಿಸಲು ವಿಫಲವಾಗಿರುವ 'ಬೋಧನಾ ಅಂಗಡಿಗಳ' ಉಪ-ಗುಣಮಟ್ಟದ ವ್ಯವಸ್ಥೆಯ ಮೂಲಕ ಅರ್ಹತೆ ಪಡೆದಿರುತ್ತಾರೆ.

ಪ್ರಸ್ತಾವಿತ ನೀತಿಯನ್ನು ಶಾಲೆ ಮತ್ತು ಶಿಕ್ಷಕರ ಶಿಕ್ಷಣಕ್ಕೆ ಹೊಸ ದೃಷ್ಟಿ ನೀಡಲು ವಿನ್ಯಾಸಗೊಳಿಸಲಾಗಿದೆ. ಹಾಗೆ ಮಾಡುವಾಗ, ಅದು ಶಿಕ್ಷಣದ ಮೂಲಭೂತ ಹಕ್ಕನ್ನು ಒದಗಿಸುವ ಸಂವಿಧಾನದ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸಬೇಕು; ಮತ್ತು ಶಿಕ್ಷಕ ಶಿಕ್ಷಣಕ್ಕಾಗಿ ನಿಯಂತ್ರಕ ಚೌಕಟ್ಟನ್ನು ನ್ಯಾಯಮೂರ್ತಿ ವರ್ಮಾ ಆಯೋಗ (ಜೆವಿಸಿ) ಮೂಲಕ ವ್ಯಾಖ್ಯಾನಿಸುವ ಸರ್ವೋಚ್ಚ ನ್ಯಾಯಾಲಯ ನಿರ್ಮಿತ ಕಾನೂನಿನ ವ್ಯಾಪ್ತಿಯಲ್ಲಿ ಇರಬೇಕು.

ಪೂನಂರವರು ದೆಹಲಿ ವಿಶ್ವವಿದ್ಯಾಲಯದ ಕೇಂದ್ರ ಶಿಕ್ಷಣ ಸಂಸ್ಥೆಯಲ್ಲಿ ಬೋಧನೆ ಮಾಡುತ್ತಿದ್ದು, ನ್ಯಾಯಮೂರ್ತಿ ವರ್ಮಾ ಆಯೋಗ (ಜೆವಿಸಿ) ಮತ್ತು ಅನುಷ್ಠಾನ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಅವರನ್ನು batra.poonam@gmail.com ನಲ್ಲಿ ಸಂಪರ್ಕಿಸಬಹುದು.